**ಕರ್ನಾಟಕ ಸರ್ಕಾರ**

ಸಂ.ಡಿಟಿಇ/02/ ಆರ್‌ಇಸಿ/2017-18

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು-560 001.
ದಿನಾಂಕ: 05-01-2018.

**-:: ಜ್ಞಾಪನ ::-**

**ವಿಷಯ:-** ಸಂಸ್ಥೆಯ ಖರ್ಚು-ವೆಚ್ಚ ಹಾಗು ಸ್ವೀಕೃತಿಯ ಮಾಹೆವಾರು ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಹಾಗು ನಿಗದಿತ ಅವಧಿಯೊಳಗೆ ಸಲ್ಲಿಸುವ ಬಗ್ಗೆ.

**ಉಲ್ಲೇಖ:-** ಸಂ: ಡಿಟಿಇ 02 ಆರ್‌ಇಸಿ 2017, ದಿ: 27-12-2017.

**-00000000-**

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಈಗಾಗಲೇ ಇಲಾಖೆಯು ಸುತ್ತೋಲೆಯೊಂದನ್ನು ಹೊರಡಿಸಿದ್ದು, ಸದರಿ ಉಲ್ಲೇಖಿತ ಸುತ್ತೋಲೆಯನ್ವಯ ಸಂಸ್ಥೆಯ ಪ್ರಾಂಶುಪಾಲರು ನಿಗದಿತ ಕಾಲಮಿತಿಯೊಳಗಾಗಿ ಸಂಸ್ಥೆಯ ಮಾಹೆವಾರು ಖರ್ಚು-ವೆಚ್ಚ ಹಾಗು ಸ್ವೀಕೃತಿಯ ಮಾಹಿತಿಯನ್ನು ಧೃಢಿಕರಿಸಿ soft copy ಸಹಿತವಾಗಿ ನಿರ್ದೇಶನಾಲಯಕ್ಕೆ ಸಲ್ಲಿಸಬೇಕಾಗಿರುತ್ತದೆ. ಆದರೆ ಸದರಿ ಉಲ್ಲೇಖಿತ ಸುತ್ತೋಲೆಯ ಆದೇಶದನುಸಾರ ಸಂಸ್ಥೆಗಳಿಂದ ಯಾವುದೇ ಮಾಹಿತಿಯು ಇಲ್ಲಿಯವರೆಗೂ ನಿರ್ದೇಶನಾಲಯದಲ್ಲಿ ಸ್ವೀಕೃತವಾಗಿರುವುದಿಲ್ಲ, ಅದ್ದರಿಂದ ಸಂಸ್ಥೆಯ ಖರ್ಚು-ವೆಚ್ಚ ಹಾಗು ಸ್ವೀಕೃತಿಯ 2017-18ನೇ ಸಾಲಿನ(ಎಪ್ರಿಲ್ ತಿಂಗಳಿನಿಂದ ಡಿಸೆಂಬರ್ ವರೆಗಿನ) ಮಾಹೆವಾರು ಮಾಹಿತಿಯನ್ನು ಸದರಿ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಮಾದರಿ ನಮೂನೆಯಂತೆ ಸಿದ್ದಪಡಿಸಿ ಧೃಢಿಕರಿಸಿ soft copy ಸಹಿತ ತ್ವರಿತವಾಗಿ ನಿರ್ದೇಶನಾಲಯಕ್ಕೆ ಸಲ್ಲಿಸಲು ಸೂಚಿಸಿದೆ, ಇನ್ನು ಮುಂದೆ ಪ್ರತಿ ತಿಂಗಳು ಮಾದರಿ ನಮೂನೆಯಂತೆ ಸಿದ್ದಪಡಿಸಿ ಧೃಢಿಕರಿಸಿ soft copy ಸಹಿತ ನಿಗದಿತ ಕಾಲಮಿತಿಯೊಳಗಾಗಿ ನಿರ್ದೇಶನಾಲಯಕ್ಕೆ ಸಲ್ಲಿಸಲು ಸೂಚಿಸಿ, ತಪ್ಪಿದಲ್ಲಿ ಆಯಾ ಸಂಸ್ಥೆಯ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತಾರೆಂದು ತಿಳಿಸಿದೆ.

ಲೆಕ್ಕಾಧಿಕಾರಿಗಳು(ಬಿಲ್ಸ್)

ಇವರಿಗೆ;

ಎಲ್ಲಾ ಸರ್ಕಾರಿ / ಇಂಜಿನಿಯರಿಂಗ್/ ಪಾಲಿಟೆಕ್ನಿಕ್/ ಕಿರಿಯ ತಾಂತ್ರಿಕಶಾಲೆಗಳ ಪ್ರಾಚಾರ್ಯರಿಗೆ.

ಪ್ರತಿ:

1. ಇ-ಆಡಳಿತ ವಿಭಾಗ, ತಾಂತ್ರಿಕ ನಿರ್ದೇಶನಾಲಯ ಬೆಂಗಳೂರು (ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)
2. ಕಛೇರಿ ಪ್ರತಿ.